ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 21–11–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| **1.** | ಕೃಷಿ ಮೇಳ – **2015:**<br><br>ಪ್ರಶಸ್ತಿ ಪ್ರದಾನ ಸಮಾರಂಭ:<br><br>ಪ್ರಶಸ್ತಿ ಪ್ರದಾನ:<br><br>ಟಿ. ಬಿ. ಜಯಚಂದ್ರ,<br>ಕಾನೂನು, ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು.<br><br>ಶ್ರೀಮತಿ ಉಮಾಶ್ರೀ<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.<br><br>ಎ. ಮಂಜು,<br>ಪಶುಸಂಗೋಪನೆ ಹಾಗೂ ರೇಷ್ಮೆ ಸಚಿವರು.<br><br>ಅಧ್ಯಕ್ಷತೆ:<br><br>ಡಾ. ಹೆಚ್. ಶಿವಣ್ಣ,<br>ಕುಲಪತಿಗಳು,<br>ಕೃಷಿ ವಿಶ್ವವಿದ್ಯಾನಿಲಯ<br>ಬೆಂಗಳೂರು. | **22–11–2015**<br><br>ಭಾನುವಾರ<br><br>ಬೆಳಿಗ್ಗೆ<br><br>**11–00** ಗಂಟೆಗೆ | ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿ.ಕೆ.ವಿ.ಕೆ.)<br>ಬೆಂಗಳೂರು |

| | | | |
|---|---|---|---|
| | ವಿ.ಸೂ.:ಈ ಕಾರ್ಯಕ್ರಮಕ್ಕೆ ವಾಹನ ವ್ಯವಸ್ಥೆ ಮಾಡಲಾಗಿದ್ದು ವಾಹನವು ಅಂದು ಬೆಂಗಳೂರು ಪ್ರೆಸ್‌ಕ್ಲಬ್ ಆವರಣದಿಂದ ಬೆಳಿಗ್ಗೆ 10–15 ಗಂಟೆಗೆ ನಿಗದಿತ ಸ್ಥಳದತ್ತ ತೆರಳಲಿದೆ | | |
| 2 | <u>ಕೃಷಿ ಮೇಳ – 2015:</u><br><br>ಸಮಾರೋಪ ಸಮಾರಂಭ:<br><br><u>ಗೌರವಾನ್ವಿತ ಅತಿಥಿಗಳು:</u><br><br>ಡಿ.ವಿ. ಸದಾನಂದ ಗೌಡ,<br>ಕೇಂದ್ರದ ಕಾನೂನು ಸಚಿವರು.<br><br>ಅನಂತಕುಮಾರ್,<br>ಕೇಂದ್ರದ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವರು<br><br>ಕೆ. ಅಭಯಚಂದ್ರ ಜೈನ್,<br>ಯುವಜನ ಸೇವೆ ಮತ್ತು ಮೀನುಗಾರಿಕೆ ಸಚಿವರು,<br><br>ಸಿ.ಎಸ್. ಪುಟ್ಟರಾಜು<br>ಲೋಕಸಭಾ ಸದಸ್ಯರು<br>ಮಂಡ್ಯ<br><br><u>ಅಧ್ಯಕ್ಷತೆ:</u><br><br>ಕೃಷ್ಣ ಭೈರೇಗೌಡ,<br>ಕೃಷಿ ಸಚಿವರು<br><br>ವಿ.ಸೂ.: ಈ ಕಾರ್ಯಕ್ರಮಕ್ಕೆ ವಾಹನ ವ್ಯವಸ್ಥೆ ಮಾಡಲಾಗಿದ್ದು ವಾಹನವು ಅಂದು ಬೆಂಗಳೂರು ಪ್ರೆಸ್‌ಕ್ಲಬ್ ಆವರಣದಿಂದ ಮಧ್ಯಾಹ್ನ 2–15 ಗಂಟೆಗೆ ನಿಗದಿತ ಸ್ಥಳದತ್ತ | 22–11–2015<br><br>ಭಾನುವಾರ<br><br>ಮಧ್ಯಾಹ್ನ<br><br>3–30 ಗಂಟೆಗೆ | ಗಾಂಧಿ ಕೃಷಿ ವಿಜ್ಞಾನ ಕೇಂದ್ರ<br>(ಜಿ.ಕೆ.ವಿ.ಕೆ.)<br>ಬೆಂಗಳೂರು |

| | | | |
|---|---|---|---|
| | ತೆರಳಲಿದೆ. | | |
| 3 | **Women's Entrepreneurship Day: Invest Karnataka – 2016**<br><br>**<u>Inauguration:</u>**<br><br>**Sathish L. Jarkiholi,**<br><br>**Minister for Small Scale Industries**<br><br>**Guests of Honour:**<br><br>**Smt. K. Ratna Prabha, IAS.,**<br><br>**Additional Chief Secretary to Government Commerce and Industries Department**<br><br>**<u>Chief Guest:</u>**<br><br>**Smt. Rajni Mishra,**<br>**Chief General Manager,**<br>**State Bank of India,**<br>**Bangalore Circle.** | **23–11–2015**<br><br>**Monday**<br>**at**<br>**10-00 AM** | **The Grand Ball Room, Hotel Chancery Pavilion, Residency Road, Opposite Bangalore Club, Bangalore.** |
| **4.** | **<u>ಪತ್ರಿಕಾಗೋಷ್ಠಿ:</u>**<br><br>**ಡಿ. ಕೆ. ಶಿವಕುಮಾರ್,**<br>**ಇಂಧನ ಸಚಿವರು**<br>**<u>ಹಾಜರಿರುವವರು:</u>**<br><br>**ಪುನೀತ್ ರಾಜ್‌ಕುಮಾರ್,**<br>**ಖ್ಯಾತ ಚಲನಚಿತ್ರ ನಟ**<br><br>**ರಮ್ಯಾ**<br>**ಖ್ಯಾತ ಚಲನಚಿತ್ರ ನಟಿ** | **23–11–2015**<br><br>**ಸೋಮವಾರ**<br><br>**ಬೆಳಿಗ್ಗೆ**<br><br>**11–00 ಗಂಟೆಗೆ** | **ಕೊಠಡಿ ಸಂಖ್ಯೆ 419**<br><br>**ವಿಕಾಸ ಸೌಧ**<br><br>**ಬೆಂಗಳೂರು** |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ

ಕರ್ನಾಟಕ ಲೋಕಸೇವಾ ಆಯೋಗವು 2014 ರಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಸಾಮಾನ್ಯ ವಿಜ್ಞಾನ ಶಿಕ್ಷಕರು, ಸಮಾಜ ವಿಜ್ಞಾನ ಶಿಕ್ಷಕರು ಹಾಗೂ ಗಣಿತ ಶಿಕ್ಷಕರು, ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಗಳನ್ನು ಆಯೋಗದ ಅಂತರ್ಜಾಲ http://kpsc.kar.nic.in/selecting_list/ Provisional Selection List ರಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ತಾತ್ಕಾಲಿಕ ಆಯ್ಕೆ ಪಟ್ಟಿಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ನಿಗದಿತ ಅವಧಿಯೊಳಗೆ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001 ಇವರಿಗೆ ಸಲ್ಲಿಸಬಹುದು.

ಪಲ್ಲವಿ:ಜಿಪಿಆರ್.

# ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ

ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ)

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ/ ಜಿಲ್ಲಾ/ಗಡಿನಾಡು ಘಟಕ ಅಧ್ಯಕ್ಷರ ಚುನಾವಣೆ ನಡೆಸಲು ಕೆ. ನಾಗರಾಜು ಕೆ.ಎ.ಎಸ್. ಅವರು ಕನ್ನಡ ಸಾಹಿತ್ಯ ಪರಿಷತ್ತು ಕೇಂದ್ರ ಚುನಾವಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿರುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ರಾಜ್ಯದ 30 ಜಿಲ್ಲೆಗಳು ಹಾಗೂ ಗಡಿ ರಾಜ್ಯಗಳು ಮತ್ತು ಹೊರನಾಡ ಮತದಾರರು ಮತ ಚಲಾಯಿಸಿ, ಕೇಂದ್ರ ಪರಿಷತ್ತಿನ ಅಧ್ಯಕ್ಷರು, 30 ಜಿಲ್ಲಾಧ್ಯಕ್ಷರು ಹಾಗೂ 4 ಗಡಿ ರಾಜ್ಯಗಳ ಅಧ್ಯಕ್ಷರು ಹೀಗೆ 35 ಸ್ಥಾನಗಳಿಗೆ ಅಧ್ಯಕ್ಷರುಗಳನ್ನು ಆಯ್ಕೆ ಮಾಡುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆಯ ಮತದಾರರ ಕರಡು ಪಟ್ಟಿಯ ತಯಾರಿಕೆಯ ಕಾರ್ಯ ಬಹುತೇಕ ಮುಕ್ತಾಯದ ಹಂತದಲ್ಲಿದ್ದು ಕರಡು ಮತದಾರರ ಪಟ್ಟಿ ತಯಾರಿಸುವ ಕಾರ್ಯ

ಮುಕ್ತಾಯವಾಗುತ್ತಿದ್ದಂತೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗುವುದು. ತದನಂತರ ಕರಡು ಮತದಾರರ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಹದಿನೈದು ದಿನಗಳ ಕಾಲಾವಕಾಶವಿರುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಭಂದನೆಗಳಂತೆ ಕರಡು ಪಟ್ಟಿ ಪ್ರಕಟಣೆಯಾದ 75 ದಿನಗಳ ನಂತರ ಚುನಾವಣೆ ನಡೆಸಲು ಅವಕಾಶವಿರುತ್ತದೆ. ಚುನಾವಣೆಯನ್ನು ಶಾಂತಿಯುತವಾಗಿ ನಿಷ್ಪಕ್ಷಪಾತವಾಗಿ, ಪಾರದರ್ಶಕವಾಗಿ ನಡೆಸಲು ಸಾರ್ವಜನಿಕರು, ಸದಸ್ಯರು, ಮತದಾರರು ಸಹಕರಿಸಬೇಕೆಂದು ಕೆ. ನಾಗರಾಜು ಕೋರಿದ್ದಾರೆ.

ಪಲ್ಲವಿ/ಕೆಎಂ

## ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳ ಸುರಕ್ಷತಾ ನೀತಿ–2015: ನವೆಂಬರ್ 27 ರಂದು ಮುಕ್ತ ಚರ್ಚೆ

ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಶಾಲಾ ಮಕ್ಕಳ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಪ್ರಕರಣಗಳ ಹಿನ್ನೆಲೆಯಲ್ಲಿ ಮಕ್ಕಳ ಸುರಕ್ಷತೆಯನ್ನು ಕಾಪಾಡುವ ನಿಟ್ಟಿನಲ್ಲಿ ವಿವಿಧ ಆಯಾಮಗಳಿಂದ, ಪರಿಶೀಲಿಸಿ ವಿವಿಧ ಹಂತಗಳಲ್ಲಿ ತಜ್ಞರೊಡನೆ ಚರ್ಚಿಸಿ ಶಿಕ್ಷಣ ಇಲಾಖೆ ಮತ್ತು ಪೊಲೀಸ್ ಇಲಾಖೆ ವತಿಯಿಂದ ಸುರಕ್ಷತಾ ಮಾರ್ಗಸೂಚಿಗಳನ್ನು ಜುಲೈ 2014 ರಲ್ಲಿ ಹೊರಡಿಸಲಾಗಿದೆ.

ಈ ಸುರಕ್ಷತಾ ನೀತಿಯನ್ನು ಅಂತಿಮವಾಗಿ ಪ್ರಕಟಿಸುವ ಮೊದಲು, ರಾಜ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಅನುಷ್ಠಾನಗೊಳಿಸಬೇಕಾದ ವಿವಿಧ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು, ಪೋಷಕರು, ಶಿಕ್ಷಣ ತಜ್ಞರು, ಕಾನೂನು ತಜ್ಞರು ಇವರುಗಳೊಡನೆ ವಿಸ್ತೃತ ಮುಕ್ತ ಚರ್ಚೆಯನ್ನು ದಿನಾಂಕ: 27–11–2015 ಮಧ್ಯಾಹ್ನ 3 ಗಂಟೆಗೆ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿರುವ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ರಾಜ್ಯ ಉಚ್ಛ ನ್ಯಾಯಾಲಯವು ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ರಾಜ್ಯ ಮಕ್ಕಳ ಸುರಕ್ಷತಾ ನೀತಿಯನ್ನು ರಚಿಸಲು ಸೂಚಿಸಿದ ಹಿನ್ನೆಲೆಯಲ್ಲಿ "ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ರಾಜ್ಯ ಮಕ್ಕಳ ಸುರಕ್ಷತಾ ನೀತಿ–2015" ನ್ನು ಸಿದ್ದಪಡಿಸಿದೆ.

ಈ ನೀತಿಯಲ್ಲಿ ಮಕ್ಕಳ ರಕ್ಷಣಾ ನೀತಿಯ ವ್ಯಾಪ್ತಿ, ಅನುಷ್ಠಾನ, ಮೇಲ್ವಿಚಾರಣೆ ಹಾಗೂ ಅನುಸರಣೆಯನ್ನು ಒಳಗೊಂಡಿರುತ್ತದೆ. ಅಲ್ಲದೆ ಸುರಕ್ಷಿತ ಶಾಲೆಯ ಪರಿಕಲ್ಪನೆ, ಸೇವಾ ನಿಯಮಗಳು, ಸಾಮರ್ಥ್ಯ ಅಭಿವೃದ್ಧಿ, ರಕ್ಷಣಾ ಕ್ರಮಗಳು, ಸುರಕ್ಷಿತ ಸಾರಿಗೆ ವ್ಯವಸ್ಥೆ, ಸದಾಚಾರ ಸಂಹಿತೆ, ನೀತಿಯಲ್ಲಿನ ನಿಯಮಗಳ ಉಲ್ಲಂಘನೆಯ ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ, ವರದಿಮಾಡುವ, ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿಸಲಾಗಿದೆ.

ಶಾಲೆಗಲ್ಲಿ ಸುರಕ್ಷತಾ ಕ್ರಮಗಳ ಆಂತರಿಕ ಪರಿಶೀಲನೆ, ಬಾಹ್ಯ ಪರಿಶೀಲನೆ ವಿವಿಧ ಇಲಾಖೆಗಳ ಪ್ರಮುಖ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ತಿಳಿಸಲಾಗಿದೆ. ಮಕ್ಕಳ ಸುರಕ್ಷತೆಯ ಮಾಪಕವಾಗಿ ಶಿಕ್ಷಣ ಸಂಸ್ಥೆಗಳು ಹಾಗೂ ಶಾಲೆಗಳಿಗೆ ತಡೆಪಟ್ಟಿಯನ್ನು ಒದಗಿಸಲಾಗಿದೆ. ಈ ತಡೆಪಟ್ಟಿಯು ಎಲ್ಲಾ ಹಂತಗಳಲ್ಲಿ ಮಕ್ಕಳನ್ನು ಸುರಕ್ಷಿತವಾಗಿಡಲು ಸಹಾಯಕವಾಗಿದೆ.

ಅಲ್ಲದೆ, ವಿವಿಧ ಇಲಾಖೆಗಳು ಮಕ್ಕಳ ಸುರಕ್ಷತೆಗಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಅಳವಡಿಸಲಾಗಿದೆ. ಸಾರ್ವಜನಿಕರು/ಮಕ್ಕಳ ಪೋಷಕರು ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಲು ಕೋರಿದೆ.

ಪಲ್ಲವಿ/ಕೆಎಂ